# ಉಪ-ತಹಶೀಲ್ದಾರರು, ನಾಡಕಾರ್ಯಾಲಯ, ತೆಕ್ಕಲಕೋಟೆ.
# ಇವರ ನ್ಯಾಯಾಲಯದಲ್ಲಿ

ವಾದಿಗಳು: ವಿರುದ್ಧ: ಪ್ರತಿವಾದಿಗಳು

ಗಾದಿಲಿಂಗಪ್ಪ ಹರಿಜನ ಜ್ಯೋತಿ ಗಂಡ: ಹೆಚ್.ನಾಗಪ್ಪ

** ** **

| ಕ್ರ.ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರು | ವಿಸ್ತೀರ್ಣ: | ತರಂ |
|---|---|---|---|---|---|---|
| 01 | ಸಿರುಗುಪ್ಪ | ತೆಕ್ಕಲಕೋಟೆ | ತೆಕ್ಕಲಕೋಟೆ | 633A | 3-07 | - |

**ಪೀಠಿಕೆ** :-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ತೆಕ್ಕಲಕೋಟೆ ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಹರಿಜನ ಗಾದಿಲಿಂಗಪ್ಪ ತಂದೆ: ಈರೇಶ ಇವರಿಂದ ಡಾಕುಮೆಂಟ್ ನಂಬರ 0580/2016-17 ದಿನಾಂಕ: 25-04-2016ರ ಪ್ರಕಾರ ಹರಿಜನ ಜ್ಯೋತಿ ಗಂಡ: ಹೆಚ್.ನಾಗಪ್ಪ ಇವರಿಗೆ ಆಗಿರುವ ನೊಂದಾಯಿತ ದಸ್ತಾವೇಜು ದಿನಾಂಕ: 26-4-2016ರಂದು ನಮೂನೆ-21 ನೋಟೀಸ್ ತಯಾರಿಸಿ ಭೂಮಿಕೇಂದ್ರದಿಂದ ಹಕ್ಕು ಬಲಾವಣೆಗೆ ಪ್ರಕ್ರಿಯೆ ಜರುಗಿಸಲು ಕಂದಾಯ ನೀರಿಕ್ಷಕರು ತೆಕ್ಕಲಕೋಟೆ ಇವರಿಗೆ ಕಡತ ಕಳುಹಿಸಿ ಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟೀಸು ಜಾರಿ ಮಾಡಿರುವ ಸಮಯದಲ್ಲಿ ನಿಗದಿತ ಅವಧಿಯೊಳಗಾಗಿ ಅಸಕ್ತಿ ಉಳ್ಳವರಿಂದ ತಕರಾರು ಅರ್ಜಿ ಸ್ವೀಕೃತವಾಗಿರುವುದರಿಂದ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರು ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕತಡ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ಪ್ರಕರಣದ ವಹಿಯಲ್ಲಿ ನಮೂದಿಸಿ ಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67ರಂತೆ ವಿಚಾರಣೆ ದಿನಾಂಕ ನಿಗದಿ ಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರು ಆಗಲು ನೋಟೀಸ್ ಜಾರಿ ನೀಡಿ ವಿಚಾರಣೆ ನಡೆಸಿ ವಿವಾದಾಸ್ಪದ ಪ್ರಕರಣವನ್ನು ಮುಕ್ತಾಯ ಗೊಳಿಸಲಾಯಿತು.

ಸದರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ಪ್ರತಿವಾದಿಗಳು ಹಾಜರಿರುತ್ತಾರೆ, ವಾದಿಗಳು ತಕರಾರು ಅರ್ಜಿಯನ್ನು ಸಲ್ಲಿಸಿದ್ದು ಆದರೆ ವಿಳಾಸವನ್ನು ಸಲ್ಲಿಸಿರುವುದಿಲ್ಲ ಕಾರಣ ಇದೊಂದು ದುರುದ್ದೇಶದಿಂದ ಕೂಡಿದ ತಕರಾರು ಅರ್ಜಿ ಎಂದು ಪರಿಗಣಿಸಿ ಸದ್ರಿ ಪ್ರಕರಣವನ್ನು ತಿರಸ್ಕರಿಸಿ ಪ್ರತಿವಾದಿಗಳು ಸದರಿ ಜಮೀನನ್ನು ನೊಂದಾವಣಿ ಮಾಡಿಸಿ ಕೊಂಡಿರುವುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ. 128 ಮತ್ತು 129ರ ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

# ಆ ದೇ ಶ

ಸಂ:ಕಂ:ಹ.ಬ.:ವಿವಾದ: 55 :2015-16 ದಿನಾಂಕ: 07-06-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆದಾರದನ್ವಯ ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಹೋಬಳಿ, ತೆಕ್ಕಲಕೋಟೆ ಗ್ರಾಮದ ಸರ್ವೆನಂ.**633A**(ಬಿ) 3-07ಎಕರೆ ಜಮೀನನ್ನು ಡಾಕುಮೆಂಟ್ ನಂ. 0580/2016-17 ದಿನಾಂಕ: 25-4-2016ರ ಪ್ರಕಾರ ವಿಕ್ರಯದಾರರ ಹೆಸರನ್ನು ಕಡಿಮೆ ಮಾಡಿ ಕ್ರಯದಾರರ ಹೆಸರಿನಲ್ಲಿ ಹಕ್ಕು ಬಲದಾವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ಓದಿ ದಿನಾಂಕ: 07-06-2016 ಬಹಿರಂಗವಾಗಿ ಘೋಷಿಸಲಾಯಿತು.

ಉಪ ತಹಶೀಲ್ದಾರರು,
ನಾಡಕಾರ್ಯಾಲಯ
ತೆಕ್ಕಲಕೋಟೆ.

ಪ್ರತಿಯನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ,
2) ಭೂಮಿ ಕೇಂದ್ರಕ್ಕೆ